ಶ್ರೀ ಪೆಂಪಾಪತಿ.—ಪ್ರತಿಯೊಂದು ಗ್ರಾಮಗಳಲ್ಲೂ ನೀರಾವರಿ, ಕೈಗಾರಿಕೆಗಳನ್ನು ಬೆಳೆಸುವ ಸಲುವಾಗಿ ತಿಂಗಳಿಗೆ ಒಂದೊಂದು ಸಾವಿರ ಕೈಗಾರಿಕೆಗಳನ್ನು ಕೊಡುತ್ತೇವೆಂದು ಹೇಳಿದರು. ಎಲ್ಲ ಕೈಗಾರಿಕೆಗಳಿಗೂ ಮತ್ತು ನೀರಾವರಿಗೂ ವಿದ್ಯುತ್ತನ್ನು ಒದಗಿಸಬೇಕಾದರೆ ಈಗಿರತಕ್ಕ ಶಕ್ತಿ ಸಾಕಾಗುವುದಿಲ್ಲ. ಆದ್ದರಿಂದ ಇದಕ್ಕೆ ಬೇರೆ ಏನು ವ್ಯವಸ್ಥೆ ಮಾಡುತ್ತೀರಿ ?

ಅಧ್ಯಕ್ಷರು.—ಇದರಲ್ಲಿ ನಿಮ್ಮ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಸೂಪ ಡ್ಯಾಂನ ಮೊದಲನೇ ಹಂತ ಇನ್ನು ಒಂದೆರಡು ವರ್ಷದಲ್ಲಿ ಮುಗಿಯುತ್ತದೆಂದು ಹೇಳಿದ್ದೀರಿ. ಇದು ಮುಗಿದನಂತರ ಲೋಂಡ-ಸದಾಶಿವ ರೋಡ್‌ನಲ್ಲಿ ಕೆಲವು ಭಾಗ ಮುಳುಗಡೆ ಆಗುತ್ತದೆ. ಈ ಮುಳುಗಡೆಯಾಗತಕ್ಕ ಜಾಗಕ್ಕೆ ಬದಲು ಬೇರೆ ರಸ್ತೆಯನ್ನು ನಿರ್ಮಾಣ ಮಾಡುವಂಥ ಯೋಚನೆ ಮಾಡಿದ್ದೀರಾ ? ಹಾಗೆ ಯೋಚಿಸಿದ್ದರೆ ಅದು ಯಾವ ಹಂತದಲ್ಲಿದೆ ?

ಅಧ್ಯಕ್ಷರು.— ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ನಾಗಝರಿ ಪವರ್ ಸ್ಟೇಷನ್‌ನ ಹತ್ತಿರ ಕಾಳೀ ನದಿಯಿಂದ ಬಂದ ಮಣ್ಣು ಜನರೇಟರ್ ಬಳಿ ಸಿಲ್ಟ್ ಆಗುತ್ತದೆ. ಈ ಸಿಲ್ಟನ್ನು ಪ್ರತಿಬಂಧಿಸುವುದಕ್ಕೆ ತಾವು ಬಂದಮೇಲೆ ಏನಾದರೂ ವಿಶೇಷ ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಜೆ. ಹೆಚ್. ಪಟೇಲ್.—ಇದರ ಬಗ್ಗೆ ಈಗಾಗಲೇ ರಿಪೇರಿ ಆಗಿದೆ.

ಶ್ರೀ ಎಂ. ಎಸ್. ಪಾಟೀಲ್.—ನಾವು ಆವರ ಜೊತೆ ಊರಿಗೆ ಹೋದಾಗ ಸಿಲ್ಟ್ ಹಾಗೆಯೇ ಇತ್ತು. ಈಗ ಸಿಲ್ಟ್ ತೆಗೆಯುವ ಬಗ್ಗೆ ಕ್ರಮ ತೆಗೆದುಕೊಂಡಿರುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಈವಾಗ ಆ ಕೆಲಸ ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮೂರನೇ ಹಂತದ್ದು ಎಷ್ಟು ಏನು ಇದೆ ಅದನ್ನು ಸರಿಮಾಡುವುದಕ್ಕೆ ತಕ್ಷಣ ಹೇಳುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೀರಿ. ಆದರೆ ಅದರ ಎಸ್ಟಿಮೇಟ್ ಮಾಡಿದ್ದೀರಿ ; ಟೋಟಲ್ ಕಾಸ್ಟ್ ಎಷ್ಟು ಆಗುತ್ತದೆಂದೂ ಕೂಡ ಎಸ್ಟಿಮೇಟ್ ಮಾಡಿದ್ದೀರಿ. ಎರಡನೇ ಸ್ಟೇಜ್ 1990ಕ್ಕೆ ಮುಗಿಯುತ್ತದೆ ಎಂದು ಹೇಳುವುದಾದರೆ ಇನ್ನೂ ಏಳು ವರ್ಷದಗಳಾಗುತ್ತದೆ. ಈ ಏಳು ವರ್ಷದಲ್ಲಿ ಎರಡನೇ ಸ್ಟೇಜ್‌ಗೆ ಕಾಸ್ಟ್ ಎಸ್ಕಲೇಷನ್ ಎಷ್ಟಾಗುತ್ತದೆ; ಮೂರನೇ ಸ್ಟೇಜ್‌ಗೆ ಕಾಸ್ಟ್ ಎಸ್ಕಲೇಷನ್ ಎಷ್ಟಾಗುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಕಾಸ್ಟ್ ಫಸ್ಟ್ ಸ್ಟೇಜ್‌ಗೆ 278 ಕೋಟಿ ರೂಪಾಯಿಗಳು. ಇದರಲ್ಲಿ 200 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ಎರಡನೆಯ ಸ್ಟೇಜ್ 1990ಕ್ಕೆ ಮುಗಿಯುತ್ತದೆ. ದಾಂಡೇಲಿ, ಕೊಡಚಳ್ಳಿ, ಕಾತ್ರ ಈ ಮೂರು ಕೆಲಸಗಳು 1990ಕ್ಕೆ ಮುಗಿಯುತ್ತವೆ.

ಶ್ರೀ ಮಲ್ಲಪ.—ಹಿಂದಿನ ಸರ್ಕಾರ ಪಂಚಾಯಿತಿಗಳಿಗೆ ಸಂಬಂಧಪಟ್ಟ ಬೀದಿದೀಪಗಳಿಗೆ ತಗಲತಕ್ಕಂಥ ಖರ್ಚನ್ನು ಸರ್ಕಾರವೇ ಭರ್ತಿಮಾಡಲಾಗುವುದೆಂದು ಹೇಳಿ, ಇದುವರೆಗೆ ಕೊಟ್ಟಿಲ್ಲ. ಈ ಸರ್ಕಾರದವರು ಆ ಹಣವನ್ನು ಕೊಡುತ್ತಾರೆಯೇ ?

ಅಧ್ಯಕ್ಷರು.—ಈಗ ಪ್ರಶ್ನೆ ಕಾಳೀ ಜಲವಿದ್ಯುತ್ ಯೋಜನೆಯ ಬಗ್ಗೆ ಇರುತ್ತದೆ. ನಿಮ್ಮ ಪ್ರಶ್ನೆ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಶ್ರೀ ಮಾಣಿಕ್ಯರಾವ್ ಪಾಟೀಲ್.—ಜನತಾ ಸರ್ಕಾರ ಬಂದು ಶ್ರೀಮಾನ್ ಜೆ. ಹೆಚ್. ಪಟೇಲ್‌ರವರು ವಿದ್ಯುಚ್ಛಕ್ತಿಯ ಮಂತ್ರಿಗಳಾದ ಮೇಲೆ ನಮ್ಮ ಕಡೆ ಓಲ್ಟೇಜ್ ಕಡಿಮೆಯಾಗಿದೆ. ಆದ್ದರಿಂದ ಕಾಳಿನದಿ ವಿದ್ಯುತ್ ಉತ್ಪಾದನೆಯಿಂದ ಓಲ್ಟೇಜ್ ಜಾಸ್ತಿ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಕೆಲವು ಕಡೆ ನಾವು ಕೊಡತಕ್ಕಂಥ ವಿದ್ಯುಚ್ಛಕ್ತಿ ಏನು ಇದೆ, ಅದನ್ನು ಉಪಯೋಗಿಸುವವರು ಸರಿಯಾದ ರೀತಿಯಲ್ಲಿ ಉಪಯೋಗಿಸದಿದ್ದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ? ಆದರೂ ಪರವಾಗಿಲ್ಲ. ವಿದ್ಯುಚ್ಛಕ್ತಿಯನ್ನು ಇಂಪ್ರೂವ್ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಕೇಂದ್ರ ಸರ್ಕಾರದವರು ಕೆಲವು ಯೋಜನೆಗಳನ್ನು ಕೈಗೊಂಡ ಹಾಗೆ ನಮ್ಮ ರಾಜ್ಯದಲ್ಲೂ ಅಂಥ ಒಂದು ಯೋಜನೆಯನು ಕೇಂದ್ರ ಸರ್ಕಾರದವರು ತೆಗೆದುಕೊಳ್ಳುವರೇ ?

ಅಧ್ಯಕ್ಷರು.—ಮಾನ್ಯ ಸದಸ್ಯರೇ ತಾವು ಗಮನಿಸಬೇಕು. ಕಾಳೀ ನದಿ ಜಲವಿದ್ಯುತ್ ಯೋಜನೆಯ ಬಗ್ಗೆ ಚರ್ಚೆಯಾಗುತ್ತಿರುವುದು.

ವಿಷಯ : ಹೊಸಪೇಟೆಯ ಪಟ್ಟಣದ ನೀರು ಸರಬರಾಜಿನ ಬಗ್ಗೆ.

ಪ್ರ. 240 (172) ಶ್ರೀ ಜಿ. ಶಂಕರಗೌಡ (ಹೊಸಪೇಟೆ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಹೊಸಪೇಟೆಯ ಈಗ ಇರುವ ಜನಸಂಖ್ಯೆಯ ಪ್ರಕಾರ ನೀರು ಸರಬರಾಜು ಕಾರ್ಯಕ್ರಮ ಸರಿಯಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಸದರಿ ನಗರಕ್ಕೆ 2ನೇ ಹಂತದ ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲು ತಗಲುವ 282 ಲಕ್ಷ ರೂಪಾಯಿಗಳನ್ನು ಸರ್ಕಾರವು ಇದೇ ಬರುವ ಮಾರ್ಚಿ 1984ರ ಒಳಗಾಗಿ ಮಂಜೂರು ಮಾಡಿ ಕೆಲಸವನ್ನು ಪೂರ್ತಿಗೊಳಿಸುವರೆ ?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು).—

(ಆ) ಬಂದಿದೆ.

(ಆ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜಿ. ಶಂಕರಗೌಡ.—ಕರ್ನಾಟಕ ರಾಜ್ಯದ ಎಲ್ಲಾ ಮುನಿಸಿಪಾಲಿಟಿಗಳಿಗೂ ಚುನಾವಣೆಗಳು ನಡೆದಿರುತ್ತವೆ. ಆದರೆ ಹೊಸಪೇಟೆಯಲ್ಲಿ ಮುನಿಸಿಪಾಲಿಟಿಯ ಚುನಾವಣೆ ನಡೆದಿಲ್ಲ. ಇದರ ಬಗ್ಗೆ ಕೇಸ್ ಹೈಕೋರ್ಟಿನಲ್ಲಿದೆ ಎಂದು ತಿಳಿದುಬಂದಿರುತ್ತದೆ. ಇದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ತಮ್ಮ ಪ್ರಶ್ನೆ ಹೊಸಪೇಟೆ ನಗರ ನೀರು ಸರಬರಾಜು ಬಗ್ಗೆ ಕೇಳಿದ್ದೀರಿ. ಅದಕ್ಕೆ ಉತ್ತರವನ್ನು ಕೊಡುವುದಾದರೆ 1983–84ರಲ್ಲಿ ಸುಮಾರು 282 ಲಕ್ಷ ರೂಪಾಯಿಗಳ ಅಂದಾಜು ಪಟ್ಟಿ ಸರ್ಕಾರಕ್ಕೆ ಬಂದಿದೆ. ಅದನ್ನು ಪರಿಶೀಲಿಸಲಾಗಿ ಈ ವರ್ಷದೊಳಗೆ ತೆಗೆದುಕೊಳ್ಳತಕ್ಕಂಥ ಸ್ಥಿತಿಯಲ್ಲಿಲ್ಲ. ಆದರೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ : ಪುರಸಭೆ ಪಟ್ಟಣಗಳಲ್ಲಿ ಒಳಚರಂಡಿಯ ಬಗ್ಗೆ.

ಪ್ರ. 241 (183) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಆ) ಒಳಚರಂಡಿ ಯೋಜನೆಯನ್ನು ಅಳವಡಿಸಿರುವ ಮತ್ತು ಇನ್ನೂ ಅಳವಡಿಸಬೇಕಾಗಿರುವ ಮುನಿಸಿಪಲ್ ಟೌನ್‌ಗಳ ಸಂಖ್ಯೆ ;

(ಆ) ಈಗ ಒಳಚರಂಡಿ ಯೋಜನೆ ಒದಗಿಸಿಲ್ಲದ ಪಟ್ಟಣಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಲು ಬೇಕಾಗುವ ಒಟ್ಟು ಅಂದಾಜು ಮೊತ್ತ ;

(ಇ) 1983–84ರ ಸಾಲಿನಲ್ಲಿ ಒಳಚರಂಡಿ ವ್ಯವಸ್ಥೆಗಳಿಗೆ ಒದಗಿಸಲಾಗಿರುವ ಒಟ್ಟು ಹಣ ಮತ್ತು 1983–84ನೇ ಸಾಲಿನಲ್ಲಿ ಒಳಚರಂಡಿ ಕೆಲಸಗಳು ಮುಗಿಯುವ ಗುರಿ ಇಟ್ಟುಕೊಂಡಿರುವ ಪಟ್ಟಣಗಳು ;

(ಈ) ಎಷ್ಟು ಪಟ್ಟಣಗಳಲ್ಲಿ ಕೆಲಸವನ್ನು ಪ್ರಾರಂಭಿಸಲಾಗಿದೆ ? ಹಾಗಿದ್ದಲ್ಲಿ ಈಗ ಕೆಲಸ ಪ್ರಾರಂಭಿಸಲ್ಪಟ್ಟಿರುವ ಪಟ್ಟಣಗಳ ಹೆಸರು.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—

(ಆ) ಮುನಿಸಿಪಲ್ ಕಾರ್ಪೋರೇಷನ್‌ಗಳೂ ಸೇರಿ ಒಟ್ಟು 16 ಮುನಿಸಿಪಲ್ ಪಟ್ಟಣಗಳಿಗೆ ಒಳಚರಂಡಿ ಸೌಲಭ್ಯ ಒದಗಿಸಲಾಗಿದೆ.

ಆ ಪಟ್ಟಣಗಳ ಹೆಸರು ಈ ರೀತಿ ಇದೆ :

(1) ಮೈಸೂರು
(2) ಹಾಸನ
(3) ಬೇಲೂರು
(4) ಮಂಗಳೂರು
(5) ದಾವಣಗೆರೆ
(6) ಹುಬ್ಬಳ್ಳಿ–ಧಾರವಾಡ
(7) ಬೆಳಗಾಂ
(8) ಬಳ್ಳಾರಿ
(9) ಹೊಸಪೇಟೆ
(10) ಬಿಜಾಪುರ
(11) ಗುಳೇದಗುಡ್ಡ
(12) ಕೋಲಾರ
(13) ಇಳಕಲ್
(14) ಜಮಖಂಡಿ
(15) ರಾಯಚೂರು
(16) ಬೆಂಗಳೂರು

216 ಮುನಿಸಿಪಲ್ ಟೌನ್‌ಗಳಿಗೆ ಇನ್ನೂ ಒಳಚರಂಡಿ ಸೌಲಭ್ಯ ಒದಗಿಸಬೇಕಾಗಿದೆ.

(ಆ) ಉಳಿದ 216 ಪಟ್ಟಣಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಲು ಬೇಕಾಗಿರುವ ಒಟ್ಟು ಅಂದಾಜು ಮೊತ್ತ 124.85 ಕೋಟಿ ರೂ.ಗಳು.

(ಇ) 1983–84ರ ಸಾಲಿಗಾಗಿ 100 ಲಕ್ಷ ರೂಪಾಯಿಗಳನ್ನು ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಲು ನಿಗದಿ ಮಾಡಲಾಗಿದೆ. 1983–84ರ ಸಾಲಿನಲ್ಲಿ ಒಳಚರಂಡಿ ಕೆಲಸಗಳನ್ನು ಕೆಳಗಿನ 3 ಪಟ್ಟಣಗಳಲ್ಲಿ ಮುಗಿಸುವ ಗುರಿ ಇದೆ :

(1) ಚಿಕ್ಕಮಗಳೂರು. (2) ರಾಣೆಬೆನ್ನೂರು. (3) ಸಿರ್ಸಿ.